ಅವನ ಗಮನ ಸೆಳೆಯಲು ಯತ್ನಿಸಿದವಳಲ್ಲ ಕಸ್ತೂರಿ. ಹೀಗೆ ಒಂದು ಅಂತರ ಕಾಪಾಡಿಕೊಂಡಿದ್ದ ಅವಳ ಸ್ವಭಾವವೇ ರಾಜೀವನಿಗೆ ಅವಳ ಕುರಿತು ಆಸಕ್ತಿ ಮೊಳೆಯಲು ಕಾರಣವಾಯ್ತೇ? ಬಹುಶಃ ಇದುವರೆಗಿನ ಅವನ ಕಾರ್ಯಕ್ಷೇತ್ರದಲ್ಲಿ ಯುವತಿಯೊಬ್ಬಳು ಅವನ ಇರುವಿಕೆಯನ್ನು ಗಮನಕ್ಕೆ ತೆಗೆದುಕೊಳ್ಳದೆ ಹೀಗೆ ನಿರ್ಲಿಪ್ತಿ ತೋರಿಸಿದ್ದು ಇದೇ ಮೊದಲಿರಬಹುದೇನೋ. ಎರಡು ವರ್ಷಗಳ ದೀರ್ಘ ಒಡನಾಟದಿಂದ ಕಸ್ತೂರಿಯ ಬುದ್ಧಿಮತ್ತೆ ಅವನ ಗಮನವನ್ನು ಆಕರ್ಷಿಸಿದ್ದು ಮತ್ತೊಂದು ಕಾರಣವಿರಬಹುದು. ಮೊದಲ ನೋಟಕ್ಕೆ ಚಕ್ಕನೆ ಸೆಳೆಯುವುದು ರೂಪ. ಆದರೆ ಒಡನಾಟದಿಂದ ನಿಧಾನಕ್ಕೆ ಅರಿವಿಗೆ ಬರುವುದು ಬುದ್ಧಿವಂತಿಕೆ. ಸಹಜ ಸ್ವಭಾವ. ಇನ್ನೊಂದು ವರ್ಷ. ಆಮೇಲೆ ರಾಜೀವನಿಗೆ ಬೇರೆಡೆಗೆ ವರ್ಗವಾಗಿಬಿಡುತ್ತದೆ. ಕಾಲ ಕೈ ಜಾರಿ ಹೋಗುವ ಮುನ್ನ ರಾಜೀವ ಸಮಯ ಸಾಧಿಸಿ ಕಸ್ತೂರಿಯಲ್ಲಿ ಪ್ರೇಮ ನಿವೇದನೆ ಮಾಡಿಕೊಂಡ – “ನನ್ನ ಮದುವೆ ಆಗ್ತೀರಾ?”

★★★

ತನ್ನ ಕಿವಿಗಳನ್ನು ತಾನೇ ನಂಬದ ಸ್ಥಿತಿ ಬಂದಿದ್ದು ಕಸ್ತೂರಿಯ ಜೀವನದಲ್ಲಿ ಅದೇ ಮೊದಲು. ‘ತಮಾಷೆ ಮಾಡ್ತಿದೀರಾ?’ ಅನ್ನುವಂತೆ ರಾಜೀವನ ಮುಖ ನೋಡಿದ್ದಳು ಕಸ್ತೂರಿ.

“ಸತ್ಯಕ್ಕೂ ಕೇಳ್ತಿದೀನಿ. ಮನೇಲಿ ನಮ್ಮಮ್ಮ ಈಗಾಗ್ಲೇ ಹತ್ತು ಹೆಣ್ಣು ನೋಡಿಯಾಯ್ತು. ಹನ್ನೊಂದನೇದನ್ನ ನೋಡೋ ಮೊದಲು ನಾನೇ ಹುಡುಗಿ ಹುಡುಕ್ಕೊಳ್ಳೋದು ವಾಸಿ ಅನ್ನಿಸ್ತು...”

“ನೀವು ತಮಾಷೆ ಮಾಡ್ತಿಲ್ಲ ತಾನೇ?” ಈ ಸಲ ಬಾಯ್ಬಿಟ್ಟು ಕೇಳಿದ್ದಳು ಕಸ್ತೂರಿ.

“ಹಾಗನ್ನಿಸ್ತಿದೆಯಾ ನಿಮಗೆ?”

ಅನಿರೀಕ್ಷಿತವಾಗಿ ಸಗ್ಗ ಕೈಗೆಟುಕಿದಂತೆ ಪುಳಕಿತಳಾಗಲಿಲ್ಲ ಕಸ್ತೂರಿ. ಆ ಅಮಾಯಕತೆಯನ್ನು ಅವಳು ಯಾವತ್ತೋ ಮೀರಿದ್ದಳು. ಭಾವ ಬದುಕನ್ನಲ್ಲ, ಬದುಕು ಭಾವವನ್ನು ಆಳುತ್ತಿರುವ ಹಂತ ತಲುಪಿದ್ದಳು. ಇಪ್ಪತ್ತಾರರ ಅವಳ ಮದುವೆಯ ಪ್ರಯತ್ನ ಮನೆಯಲ್ಲಿ ನಡೆಯುತ್ತಿದ್ದರೂ ಯಾವುದೂ ಹೊಂದಿಕೆಯಾಗಿರಲಿಲ್ಲ. ತಂಗಿಯ ಮದುವೆಯನ್ನು ಮೊದಲು ಮಾಡಿಬಿಡಿ ಎನ್ನುವ ಅವಳ ಮಾತು ಅಪ್ಪ, ಅಮ್ಮನಿಗೆ ಪಥ್ಯವಾಗಿರಲಿಲ್ಲ. ಹೀಗಿರುವಾಗ ಅನಿರೀಕ್ಷಿತವಾಗಿ ಮದುವೆಯ ಪ್ರಸ್ತಾಪವನ್ನು ಅವಳ ಮುಂದಿಡುತ್ತಿದ್ದಾನೆ ಸಹೋದ್ಯೋಗಿ. ಯಾವ ಹೆಣ್ಣೂ ಕೈ ಹಿಡಿಯಲು ಬಯಸುವ ಅಪರೂಪದ ಸೌಂದರ್ಯವನ್ನು ವರವಾಗಿ ಪಡೆದವನು. ಅವನು ಮದುವೆಯ ಮಾತಾಡುತ್ತಿದ್ದಂತೆ ಹೂಂಗುಟ್ಟಿ ತನ್ನ ಸ್ವಾಭಿಮಾನವನ್ನು ಪರೀಕ್ಷೆಗೊಡ್ಡಲು ಅವಳು ತಯಾರಿರಲಿಲ್ಲ. ಬಿಗುವಾಗಿ ಹೇಳಿದ್ದಳು,

“ಮನೇಲಿ ಕೇಳಿ ಹೇಳ್ತೀನಿ. ನೀವೂ ಕೇಳಿ ಮನೇಲಿ...”

ಈ ಮಾತುಕತೆಯ ಫಲಸ್ವರೂಪವಾಗಿ ಅದೊಂದು ದಿನ ರಾಜೀವ ತನ್ನ ಪರಿವಾರದೊಡನೆ ಕಸ್ತೂರಿಯ ಮನೆಗೆ ಭೇಟಿ ಕೊಟ್ಟಿದ್ದ. ಒಬ್ಬರನ್ನೊಬ್ಬರು ಮೀರಿಸುವಂತಾ ರೂಪವಂತರ ಅಪರೂಪದ ಕುಟುಂಬ. ಅವನ ಬಳಗವನ್ನು ನೋಡಿ ಕಸ್ತೂರಿ ಮಾತ್ರವಲ್ಲ, ಅವಳ ಮನೆಯವರೂ ಬೆರಗಾಗಿದ್ದರು. ಬಂದವರನ್ನು ಯಥೋಚಿತವಾಗಿ ಸತ್ಕರಿಸಿ ಬೀಳ್ಕೊಟ್ಟ ಮೇಲೆ ಕಸ್ತೂರಿಯ ಅಮ್ಮ ಭವಿಷ್ಯ ನುಡಿದಿದ್ದರು,

“ಇದು ಆಗೋದಲ್ಲ, ಹೋಗೋದಲ್ಲ. ಕಸ್ತೂರೀನ ನೋಡ್ತಿದ್ದ ಹಾಗೆ ಆ ಹೆಂಗಸಿನ ಮುಖ ಕಪ್ಪಾಗಿದ್ದು ನಂಗಂತೂ ಗೊತ್ತಾಯ್ತಪ್ಪಾ. ಹೋಗ್ಲಿ ಬಿಡಿ, ಇಂತೋರ ಸಾವಾಸ ನಮಗೂ ಬೇಡ...”

★★★

ಅಮ್ಮನ ಭವಿಷ್ಯ ಸುಳ್ಳಾಯ್ತು. ರಾಜೀವ ಎನ್ನುವ ವರನೊಡನೆ ಕಸ್ತೂರಿ ಎನ್ನುವ ಕನ್ಯೆಯ ವಿವಾಹ ಸಾಂಗವಾಗಿ ನಡೆದುಹೋಯ್ತು. ಇಷ್ಟಾಗುವ ಮುನ್ನ ಆ ಮನೆಯಲ್ಲಿ ಒಂದು ಯುದ್ಧಕಾಂಡವೇ